ಸ್ವಲ್ಪ ಹೆಚ್ಚೇ ಇರುವುದು ಒಳ್ಳೆಯದು'' ಮಲನ್ ವಿವರಿಸಿದಳು.

ಮಿನ್ನಿ ತನ್ನ ಮಿನಕಿಯ ದುಪ್ಪಟ್ಟಾ ತೆಗೆದು, ಅಮ್ಮನ ಭುಜಕ್ಕೆ ಹೊದಿಸಿ, ಅಮ್ಮನ ಸಾದಾ ದುಪ್ಪಟ್ಟಾವನ್ನು ತಾನು ಹಾಕಿಕೊಂಡು ಅಡುಗೆಕೋಣೆಯೊಳಗೆ ಹೋದಳು.

ರಾತ್ರಿಯ ಪೂರ್ಣ ಚಂದಿರನ ಬೆಳಕು ಮಾವಿನ ಮರದ ಕೊಂಬೆಗಳನ್ನು ದಾಟಿ, ಮಲನ್‌ಳ ಮುಖಕ್ಕೆ ಚೆಲ್ಲಿತ್ತು. ಹುಣ್ಣಿಮೆಯ ಚಂದ್ರ ಅವಳಲ್ಲಿ ಏನೋ ಹೊಸತನದ ನಶೆ ಏರಿಸುತ್ತಿದ್ದ. ಇನ್ನೇನು ನಾಲ್ಕು ದಿನಗಳಲ್ಲಿ, ಹಳ್ಳಿಯ ಹೆಂಗಸರು, ಅವಳ ಮನೆಯ ಅಂಗಳದಲ್ಲಿ ಸೋಬಾನೆ ಪದಗಳನ್ನು ಹಾಡುವವರಿದ್ದರು. ಅವರೆಲ್ಲಾ ಅವಳ ಮಗಳ ಅಂಗೈಗೆ, ಅಂಗಾಲಿಗೆ ಮೆಹಂದಿಯನ್ನು ಹಚ್ಚುತ್ತಾರೆ. ಎಲ್ಲರೂ ಸೇರಿ ಮದುಮಗಳಿಗೆ ಆಭರಣಗಳ ಅಲಂಕಾರ ಮಾಡುತ್ತಾರೆ. ಗಾಢ ಕೆಂಪು ರೇಷ್ಮೆ ಬಟ್ಟೆಯಲ್ಲಿ ಮಗಳು ಹೇಗೆ ಕಾಣಬಹುದು? ಅನಂತರ ಮದುಮಗ ಕುದುರೆಯನೇರಿ ಬಂದು ಅವಳನ್ನು ತನ್ನ ಮನೆಗೆ ಕರೆದೊಯ್ಯುತ್ತಾನೆ. ಅವನು ಮೆಹಂದಿ ಹಚ್ಚಿದ ಅವಳ ಅಂಗೈಗೆ, ಅಂಗಾಲಿಗೆ ಮುತ್ತಿಕ್ಕುತ್ತಾನೆ.

ಇವೆಲ್ಲಾ ಘಟನೆಗಳು, ಬಹಳ ಹಿಂದೆ, ಮಲನ್‌ಳ ಜೀವನದಲ್ಲೂ ನಡೆದಿದ್ದವು. ಆದರೆ, ಮಿನ್ನಿಯ ಅಪ್ಪ, ಎಂದೂ ಅವಳ ಅಂಗಾಲಿಗೆ ಮುತ್ತಿಕ್ಕಲೇ ಇಲ್ಲ. ಅವಳ ಅಂಗೈಗಳನ್ನು ತನ್ನ ಕಣ್ಣುಗಳಿಗೆ ಒತ್ತಿಕೊಳ್ಳಲಿಲ್ಲ. ಅವನು ಯಾವಾಗಲೂ ನಿತ್ರಾಣನಾಗಿಯೇ ಮನೆಗೆ ಬರುತ್ತಿದ್ದ. ಉಂಡು ಗಡದ್ದಾಗಿ ನಿದ್ರಿಸುತ್ತಿದ್ದ. ಮಧ್ಯರಾತ್ರಿಯಲ್ಲಿ, ಮಗನನ್ನು ಪಡೆಯುವ ಬಯಕೆಯಿಂದ ಉತ್ತೇಜಿತನಾಗುತ್ತಿದ್ದ, ಮತ್ತೆಲ್ಲವೂ ಬೇಗನೇ ಮುಗಿದುಹೋಗುತ್ತಿತ್ತು. ಮಿಲನ್‌ಳಿಗೆ ತಣಿದು ನಿದ್ದೆ ಬರಲು, ನಕ್ಷತ್ರಗಳನ್ನು ಎಣಿಸುತ್ತಾ ಗಂಟೆಗಟ್ಟಲೇ ಕಾಯಬೇಕಾಗುತ್ತಿತ್ತು. ಮಧ್ಯರಾತ್ರಿಯ ಈ ಪ್ರತಾಪಗಳಿಂದ, ಪ್ರತಿ ವರ್ಷವೂ ಹೆಣ್ಣುಮಕ್ಕಳೇ ಹುಟ್ಟುತ್ತಿದ್ದವು. ಆದರೆ, ಮಿನ್ನಿಯನ್ನು ಹೊರತುಪಡಿಸಿ, ಎಲ್ಲರೂ ತೀರಿಕೊಂಡಿದ್ದರು. ಮರದಲ್ಲಿ ಕೊನೆಗೊಮ್ಮೆ ಒಂದೇ ಹಣ್ಣು ಉಳಿಯುವಂತೆ ಬದುಕುಳಿದ ಮಿನ್ನಿ, ಅಮ್ಮನ ತದ್ರೂಪಿಯಾಗಿದ್ದಳು.

ಮಿನ್ನಿಗೆ ಮಲನ್‌ಳಂತೆ ಜಿಂಕೆಯಂತಹ ಕಣ್ಣುಗಳಿದ್ದವು. ಉದ್ದನೆಯ ಕಪ್ಪು ಕೂದಲಿತ್ತು. ಮಗಳ ಸೊಂಪಾದ ತುಂಬಿದೆದೆ ಕಂಡಾಗ, ಮಲನ್‌ಳಿಗೆ ತನ್ನ ಶಮನವಾಗದ ಆವೇಗಗಳೆಲ್ಲಾ ಅವಳಲ್ಲಿ ಮತ್ತೆ ಒಡಮೂಡಿದೆಯೆನಿಸಿತ್ತು.

ಮಿನ್ನಿ ಅಡುಗೆಯ ಪಾತ್ರೆಗಳನ್ನೆಲ್ಲಾ ಉಜ್ಜಿ, ಶುಚಿಗೊಳಿಸಿ, ಅಂಗಳದ ಬಾಗಿಲನ್ನು ಅಗುಳಿಹಾಕಿ ತನ್ನ ಕೋಣೆಗೆ ಮಲಗಲು ಹೋದಳು. ಮಲನ್ ಒಬ್ಬಂಟಿಯಾದಳು.

ಆಗಲೇ ರಾತ್ರಿ ಬಹಳವಾಗಿತ್ತು. ಚಂದ್ರ ಪ್ರಖರವಾಗಿದ್ದ. ಚಂದ್ರನ ಬೆಳಕಿನಲ್ಲಿ, ಒಬ್ಬಳೇ ಅಂಗಳದಲ್ಲಿ ಕುಳಿತು ಮಾಡುವುದಾದರೂ ಏನೆಂದು ತನ್ನನ್ನೇ ಪ್ರಶ್ನಿಸಿಕೊಂಡಳು. ತಾನು ಯಾರನ್ನು ಕಾಯುತ್ತಿದ್ದೇನೆ? ಮಿನ್ನಿ ಆಗಲೇ ನಿದ್ರಾವಶಳಾಗಿದ್ದಳು ಮತ್ತು ಅವಳಪ್ಪ ದೂರದ ಪಟ್ಟಣದಲ್ಲಿ ಒಬ್ಬನೇ ಇದ್ದಾನೆ, ಇಂತಹ ರಾತ್ರಿಗಳಲ್ಲಿ ಅವನೇಕೆ ದೂರುವಿರುತ್ತಾನೆ? ಹುಣ್ಣಿಮೆಯ ರಾತ್ರಿಗಳಂದು ಯಾವುದೇ ಪ್ರಚೋದನೆಗೆ ಒಳಗಾಗದಂತೆ, ಅವಳು ಮನೆಯೊಳಗೇ ಉಳಿದುಬಿಡುತ್ತಿದ್ದಳು. ಆದರೆ, ಈ ರಾತ್ರಿ ಅವಳು ಮಗಳ, ಮಿನಕಿಯ ದುಪ್ಪಟ್ಟಾವನ್ನು ಹೊದ್ದುಕೊಂಡಿದ್ದಳು. ಮಿನಕಿಗಳು ಚಂದ್ರನ ಬೆಳಕಿಗೆ ಮಿನುಗುತ್ತಿದ್ದವು; ನಕ್ಷತ್ರಗಳು ಅವಳ ಜಡೆಯೊಳಗೆ ಬಂದಿಯಾಗಿದ್ದಂತೆ ಕಾಣುತ್ತಿದ್ದವು. ಮಿನಕಿಗಳು ಅವಳ ಕಣ್ರೆಪ್ಪೆಯ ಮೇಲೆ, ಮುಖ–ಭುಜದ ಮೇಲೆ ಮಿನುಗುತ್ತಿದ್ದವು. ಕೋಗಿಲೆಯೊಂದು ಮಾವಿನ ಮರದ ಮೇಲೆ ಕುಹೂ, ಕುಹೂ, ಕುಹೂ ಕುಹೂ ಎಂದು ಕರೆಯುತ್ತಿತ್ತು.

ಅವಳು ಯೋಚನೆಗಳಲ್ಲಿ ಕಳೆದುಹೋಗಿದ್ದಳು. ಮಗಳ ಮದುವೆ ಇನ್ನೊಂದು ವಾರದಲ್ಲಿ ಆಗಿಹೋಗುತ್ತದೆ. ಅನಂತರ ಈ ದೊಡ್ಡ ಅಂಗಳದಲ್ಲಿ ಅವಳು ಒಂಟಿಯಾಗಿ ಉಳಿದುಬಿಡುತ್ತಾಳೆ. ಒಬ್ಬಂಟಿಯಾಗಿ ಬದುಕುವುದು ಕಲಿಯಬೇಕಾಗುತ್ತದೆ. ಅವಳ ಗಂಡ ಯಾವಾಗಲೂ ಹಣ ಸಂಪಾದಿಸುವುದರಲ್ಲಿ, ಸಾಲ ಕೊಡುವುದರಲ್ಲಿ, ವಸೂಲಿಯಲ್ಲಿ ಮುಳುಗಿರುತ್ತಾನೆ. ಸಂಜೆ ತಡವಾಗಿ ಬಂದು ದೊಪ್ಪನೆ ಮಲಗಿಬಿಡುತ್ತಾನೆ.